# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 82 ವೆಚ್ಚ 6/2022 ಇ

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:24.03.2022

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು
ರವರಿಗೆ:
ಖಜಾನೆ ಆಯುಕ್ತರು,
ಖಜಾನೆ ಆಯುಕ್ತಾಲಯ, 5 & 6 ನೇ ಮಹಡಿ,
ಕೆಪಿಸಿಎಲ್ ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-560001

ಮಾನ್ಯರೆ,

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ರಾಜ್ಯ ವಲಯದಡಿ ಲಭ್ಯವಿರುವ ಅನುದಾನದಿಂದ ಬಾಕಿ ವೇತನ ಸೆಳೆಯಲು ಸಹಮತಿ ಕೋರಿರುವ ಬಗ್ಗೆ.

ಉಲ್ಲೇಖ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾಗಿರುವ ಪತ್ರಗಳು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ವಿವಿದ ಕಾರಣಗಳಿಂದ ಅಂದರೆ ರಜೆ ಮಂಜೂರಾತಿ, ವೇತನ ಬಡ್ತಿ, ನಿವೃತ್ತ ಮತ್ತು ಮೌತಿಯಾಗಿರುವ ಸಿಬ್ಬಂದಿಯವರ ಅವಲಂಬಿತರಿಗೆ ಬಾಕಿ ವೇತನವನ್ನು ಪಾವತಿಸಬೇಕಾಗಿರುವುದರಿಂದ ಲಭ್ಯವಿರುವ ಅನುದಾನದಿಂದ ಸೆಳೆಯಲು ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿನಾಂಕ:3.8.2021ರಲ್ಲಿನ ಷರತ್ತನ್ನು ಸಡಿಲಗೊಳಿಸಿ ಬಾಕಿ ವೇತನವನ್ನು ಸೆಳೆಯಲು ಅವಕಾಶ ನೀಡುವಂತೆ ಸಂಬಂಧಿಸಿದ ಖಜಾನಾದಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಪ್ರಸ್ತಾವಿಸಿರುತ್ತಾರೆ.

| ಕ್ರ.ಸಂ | ಜಿಲ್ಲಾ/ತಾಲ್ಲೂಕು ಪಂಚಾಯತಿ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ನೀಡಿರುವ ಸಮಜಾಯಿಷಿ |
|---|---|---|---|
| 1 | ಕೊಡಗು<br>ಚಾಮರಾಜನಗರ<br>ಚಿಂತಾಮಣಿ<br>ಹಾವೇರಿ<br>ಮುದ್ದೇಬಿಹಾಳ<br>ಕುಷ್ಟಗಿ<br>ಶಿಗ್ಗಾಂವಿ<br>ಹಾನಗಲ್ | 2403-00-101-0-61-005<br>2225-00-103-0-74-005<br>2211-00-102-0-22-005<br>2202-00-101-0-61-005<br>2202-00-101-0-63-101<br>2202-00-101-0-64-005<br>2202-00-102-0-62-005<br>2202-00-101-0-19-005<br>2202-00-101-0-65-101<br>2202-00-101-0-18-005<br>2515-00-102-0-61-005<br>2210-00-104-0-61-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 2 | ಕೊಡಗು ಜಿಲ್ಲೆ<br>ಹಾವೇರಿ ಜಿಲ್ಲೆ | 2210-00-106-0-01-005<br>2210-00-106-0-02-005<br>2210-00-106-0-03-005<br>2059-00-101-0-26-005<br>2202-00-102-0-28-101<br>2202-00-102-0-39-101 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |

ಪ್ರಸ್ತಾವನೆಯು ಬಾಕಿ ವೇತನ/ಇತರೆ ವೆಚ್ಚವನ್ನು ಲಭ್ಯವಿರುವ ಅನುದಾನದಿಂದ ಭರಿಸಲು ಹಾಗೂ ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರದಿರುವ ಷರತ್ತನ್ನು ವಿಧಿಸಿ ಬಾಕಿ ವೇತನವನ್ನು ಸೆಳೆಯಲು ಸುತ್ತೋಲೆಯ ಷರತ್ತನ್ನು ಸಡಿಲಿಸಿ ಸಹಮತಿಸಿದೆ (**ಜಿಲ್ಲಾವಲಯ ಲೆಕ್ಕ ಶೀರ್ಷಿಕೆಯಿದ್ದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕಗಳಿಗೆ ಅನ್ವಯವಾಗುತ್ತದೆ- ಸದರಿ ಅಂಶವು ಈ ಹಿಂದೆ ಹೊರಡಿಸಿರುವ ಆದೇಶಗಳಿಗೂ ಅನ್ವಯವಾಗುತ್ತದೆ**). ಅದರಂತೆ ಬಾಕಿ ವೇತನ/ಇತರೆ ವೆಚ್ಚ ಸೆಳೆಯಲು ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

ತಮ್ಮ ನಂಬುಗೆಯ,

(ಶ್ರೀಕೃಷ್ಣ ಎನ್ ಬುಗಟ್ಯಾಗೋಳ)
ವಿಶೇಷಾಧಿಕಾರಿ(ಜಿಪಂ) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಪ್ರತಿ:

1. ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ ಕಾರ್ಯನಿರ್ವಾಹಕ ಅಧಿಕಾರಿಗಳು
2. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳಿಗೆ ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ